ವೀರೇಶ್ ಕುಮಾರ ಎನ್.ಮಠಪತಿ ಸಾರಥ್ಯದಲ್ಲಿ Postal Reg.No. BDR/062/2019-2021 RNI No. KAR KAN/2016/68190

# ಕಸ್ತೂರಿ ಕಿರಣ

ಸಮಸ್ತ ಕನ್ನಡಿಗರ ಆಸ್ತಿ ಕಸ್ತೂರಿ ಕಿರಣ ಪತ್ರಿಕೆ (ರಾಜ್ಯ ಮಟ್ಟದ ಕನ್ನಡ ಪಾಕ್ಷಿಕ ಪತ್ರಿಕೆ)

Kasturi Kiran KANNADA FORTNIGHTLY BIDAR (KARNATAKA) | Volume- 6 ಸಂಪುಟ-6 | March 16-31, 2021 ಮಾರ್ಚ 16-31, 2021 | Rs. 10/- ಬೆಲೆ: 10/- | Page: 08 ಪುಟ: 08 | Issue: 04 ಸಂಚಿಕೆ: 04

## 'ಬೀದರ್ : ಕೆಂಪು ವಲಯ ಘೋಷಣೆ - ನಿತ್ಯ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು'





## ಎಚ್ಚರಗೊಳ್ಳದ ಶಿಕ್ಷಣ ಇಲಾಖೆ: ವಾಸ್ತವ ತಿಳಿಯದ ಶಿಕ್ಷಣ ಸಚಿವ ಜೀವ ಭಯದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳು

## ಅನುದಾನ ರಹಿತ ಶಾಲೆಗಳಿಗೆ ಸರ್ಕಾರ ಜೀವ ಜಲ ನೀಡುವುದೇ.?

*ಅಥವಾ ಸಚಿವರ ಜಿದ್ದಿನ ಜಾತ್ರೆಯಲ್ಲಿ ವಿಷ ಉಣಿಸುವುದೇ.?*

Rural Self Employment Technology Training Institute RSETTI

ಮೂರು ದಿನಗಳ ತರಬೇತಿ ಮುಪ್ಪಾಗುವ ವರೆಗೂ ನಿತ್ಯ ಹಣ ಸಂಪಾದಿಸುವ

ಅಲ್ಪಾವಧಿ ಕೋರ್ಸ್‌ಗೆ ಪ್ರವೇಶ ಆರಂಭ..!

ಅಂತು ಮಾರುಕಟ್ಟೆಗೆ ಬಂತು

ಸೋಲಾರ್ ಮೊಬೈಲ್ ಚಾರ್ಜರ್



# 'ಬೀದರ್ : ಕೆಂಪು ವಲಯ ಘೋಷಣೆ - ನಿತ್ಯ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು'

***ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ನಿತ್ಯ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಇಲ್ಲಿಯ ಬ್ರಿಮ್ಸ್ ನಲ್ಲಿ ನಿತ್ಯ ಮೂರು ಸಾವಿರ ಜನರ ಪರೀಕ್ಷೆ ನಡೆಸಲಾಗುತ್ತಿದೆ. ಜಿಲ್ಲೆ ಮಹಾರಾಷ್ಟ್ರ ರಾಜ್ಯದ ಎರಡು ಗಡಿ ಭಾಗದಲ್ಲಿರುವುದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚಾಗಲೂ ಬಲವಾದ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ. ರಾಷ್ಟ್ರೀಹ ಹೆದ್ದಾರಿ 65 ಸಸ್ತಾಪುರ್ ಬಂಗ್ಲಾ, ಬಿರಾದ್ , ಭಾಲ್ಕಿ ಪಟ್ಟಣಗಳ ಕಡೆಯಿರುವ ಉದಗೀರ ಭಾಗಗಳಿಂದ ನಿತ್ಯ ಸಾವಿರಾರು ಜನ ಜಿಲ್ಲೆಯಲ್ಲಿ ಪ್ರವೇಶ ಪಡೆಯುತ್ತಿರುವುದು ಪ್ರಕರಣ ಹೆಚ್ಚಾಗಲು ಕಾರಣವಾಗುತ್ತಿದೆ.***

ಒಂದು ವಾರದಿಂದ ನಿತ್ಯ ಸರಾಸರಿ 50 ಕೋವಿಡ್ ಪ್ರಕರಣಗಳು ಬೆಳಕಿಗೆ ಬಂದಿವೆ. ಜಿಲ್ಲಾ ನ್ಯಾಯಾಲಯದಲ್ಲಿ ಬುಧವಾರ ಐವರಿಗೆ ಹಾಗೂ ಗುರುವಾರ ನಾಲ್ವರಿಗೆ ಸೋಂಕು ತಗುಲಿದೆ. ಒಬ್ಬ ವಕೀಲ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ನಗರಸಭೆ ಕಚೇರಿಯ ಇಬ್ಬರು ಸಿಬ್ಬಂದಿಗೆ ಕೋವಿಡ್ ತಗುಲಿದೆ. ಕೋರ್ಟ್ ಕಲಾಪ ಸ್ಥಗಿತಗೊಳಿಸಲಾಗಿದ್ದು, ನಗರಸಭೆ ಕಚೇರಿ ಸೀಲ್ ಡೌನ್ ಮಾಡಲಾಗಿದೆ. ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಪ್ರವೇಶದ್ವಾರ ಬಂದ್ ಮಾಡಲಾಗಿದೆ.

ಮೂರು ಹೆಚ್ಚುವರಿ ಚೆಕ್‌ಪೋಸ್ಟ್: 'ಬೀದರ್ ಜಿಲ್ಲೆ ಕೆಂಪು ವಲಯದಲ್ಲಿ ಗುರುತಿಸಿಕೊಂಡಿದ್ದರಿಂದ ಕೋವಿಡ್ ಶಂಕಿತರ ಗಂಟಲು ದ್ರವ ಮಾದರಿ ಪಡೆದು ಪರೀಕ್ಷೆ ನಡೆಸಲಾಗುತ್ತಿದೆ. ನಿತ್ಯ ಮೂರು ಸಾವಿರ ಜನರ ಪರೀಕ್ಷೆ ಮಾಡಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ರಾಮಚಂದರ್ ಆರ್ ತಿಳಿಸಿದ್ದಾರೆ.



ಅಧಿಕಾರಿಗಳು ಬಸವಕಲ್ಯಾಣ ವಿಧಾನಸಭೆ ಉಪ ಚುನಾವಣೆ, ನಗರಸಭೆ ಚುನಾವಣೆ ಹಾಗೂ ಮೂರು ಗ್ರಾಮ ಪಂಚಾಯಿತಿಗಳ ಚುನಾವಣೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕಂದಾಯ ಹಾಗೂ ಪೊಲೀಸ್ ಸಿಬ್ಬಂದಿ ಮೇಲೆ ಸದ್ಯ ಕೆಲಸದ ಒತ್ತಡ ಹೆಚ್ಚಿದೆ. ಹೀಗಾಗಿ ಅಧಿಕಾರಿಗಳಿಗೆ ಬೀದಿಗಿಳಿದು ದಂಡ ವಿಧಿಸಲು ಸಾಧ್ಯವಾಗುತ್ತಿಲ್ಲ. ಜನ ಮಾತ್ರ ಯಾರೂ ಕೇಳುತ್ತಿಲ್ಲ ಎಂದು ಮಾಸ್ಕ್ ಧರಿಸದೆ ಸಾರ್ವಜನಿಕ ಸ್ಥಳದಲ್ಲಿ ಸಂಚರಿಸುತ್ತಿದ್ದಾರೆ. ಇದು ಹಲವರನ್ನು ಸಂಕಟಕ್ಕೆ ಸಿಲುಕಿಸುತ್ತಿದೆ.

'ಕೋವಿಡ್ ಚಿಕಿತ್ಸಾ ನಿರ್ವಹಣೆಯ ಮಾರ್ಗಸೂಚಿಗಳ ಪಾಲನೆ, ಪರೀಕ್ಷೆ, ಸಂಪರ್ಕಿತರ ಪತ್ತೆ ಹಾಗೂ ಚಿಕಿತ್ಸೆಗೆ ಒತ್ತು ಕೊಡಲಾಗಿದೆ. ಸಾರ್ವಜನಿಕರು ಸಹ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಮತ್ತೆ ಲಾಕ್‌ಡೌನ್ ಹಾಗೂ ಕರ್ಫ್ಯೂ ಜಾರಿಗೊಳಿಸುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬಾರದು' ಎಂದು ಜಿಲ್ಲಾಧಿಕಾರಿ ರಾಮಚಂದ್ರನ್ ಮನವಿ ಮಾಡಿದ್ದಾರೆ.

'ನೆರೆಯ ರಾಜ್ಯದಿಂದ ಬರುತ್ತಿರುವ ವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಬೇರೆ ಬೇರೆ ಮಾರ್ಗಗಳಿಂದ ಜಿಲ್ಲೆಗೆ ಬರುತ್ತಿರುವ ಕಾರಣ ಚೆಕ್‌ಪೋಸ್ಟ್‌ಗಳ ಸಂಖ್ಯೆಯನ್ನು ಆರಕ್ಕೆ ಹೆಚ್ಚಿಸಲಾಗಿದೆ. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುವ ಪ್ರತಿಯೊಂದು ಮಾರ್ಗದಲ್ಲಿ ತಪಾಸಣೆ ತೀವ್ರಗೊಳಿಸಲಾಗಿದೆ.

ಪ್ರತಿಯೊಬ್ಬರು ಮಾಸ್ಕ್ ಧರಿಸಬೇಕು. ವೈಯಕ್ತಿಕ ಅಂತರ ಕಾಯ್ದುಕೊಳ್ಳಬೇಕು. ಸಾರ್ವಜನಿಕ ಪ್ರದೇಶದಲ್ಲಿ ಅನಗತ್ಯ ವಾಗಿ ಸಂಚರಿಸುವುದನ್ನು ಕಡಿಮೆ ಮಾಡಬೇಕು. ದೊಡ್ಡ ಸಮಾರಂಭ ಗಳಿಂದ ದೂರು ಇರಲು ಪ್ರಯತ್ನಿಸ ಬೇಕು. ಮದುವೆಗಳಲ್ಲಿ ಹೆಚ್ಚು ಜನ ಸೇರುತ್ತಿರುವ ಕಾರಣ ಸಮಸ್ಯೆ ಯಾಗುತ್ತಿದೆ. ಸಾರ್ವಜನಿಕರು ಕೋವಿಡ್ ನಿಮಯ ಪಾಲಿಸಿ ಸೋಂಕು ಹರಡದಂತೆ ಸಹಕಾರ ನೀಡಬೇಕು' ಎಂದು ಜಿಲ್ಲಾಧಿಕಾರಿ ರಾಮಚಂದರ್ ಆರ್ ಮನವಿ ಮಾಡಿದ್ದಾರೆ.

**ಬೇಕಾಗಿದ್ದಾರೆ**

ಶೀಘ್ರವಾಗಿ ಬರುತ್ತಿರುವ ಕನ್ನಡ ಪಾಕ್ಷಿಕ ಪತ್ರಿಕೆಗೆ ರಾಜ್ಯಾದ್ಯಂತ ಹೋಬಳಿ, ಪುರಸಭೆ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸೇವೆ ಸಲ್ಲಿಸಲು ಪದವಿಧರರಿಂದ **ವರದಿಗಾರರು, ಜಾಹಿರಾತು ಸಂಗ್ರಹಕಾರರು, ಪತ್ರಿಕಾ ಮಾರಾಟ ಎಜೆಂಟರ** ಹುದ್ದೆಗೆ ಅರ್ಜಿ ಕರೆದಿದ್ದು ಆಸಕ್ತರು ಕೆಳಗಿನ ವಿಳಾಸಕ್ಕೆ 7 ದಿನಗಳಲ್ಲಿ ಅರ್ಜಿ ಸಲ್ಲಿಸಬೇಕು

**ATOZ ALL SERVICES**

P.B.NO:01,PO:NIRNA,Dist.BIDAR
Pincode: 585227



## ಕಸ್ತೂರಿ ಕಿರಣ

ಕನ್ನಡ ಪಾಕ್ಷಿಕ ಪತ್ರಿಕೆ
ಸಂಪುಟ-6 ಸಂಚಿಕೆ 04
ಪ್ರಧಾನ ಸಂಪಾದಕರು, ಪ್ರಕಾಶಕರು,
ಮುದ್ರಕರು ಹಾಗೂ ಮಾಲೀಕರು
**ವೀರೇಶಕುಮಾರ.ಎನ್.ಮಠಪತಿ**
M.Sc,M.Ed,M.A(Kan),M.A(J&MC)
ಸುದ್ದಿ ಸಂಪಾದಕ
**ದುರ್ಯೋಧನ್ ಹೂಗಾರ್**
ಉಪ ಸಂಪಾದಕರು
ಶ್ರೀಮತಿ ಸಂಗೀತಾ.ವಿ.ಮಠಪತಿ
M.A,B.Ed
ಶ್ರೀಮತಿ ಲಕ್ಷ್ಮಿ.ಸಿ.ಮಠಪತಿ
M.A,B.Ed
ಕಸ್ತೂರಿ ಕಿರಣ ವರದಿಗಾರರು
ಶಿವಕುಮಾರ ಸ್ವಾಮಿ ದಾಡಗಿ (ಜಿಲ್ಲಾ ವರದಿಗಾರ)
ರವಿಕುಮಾರ್ (ಬೀದರ್ ಜಿಲ್ಲೆ)
ಗಣೇಶ್ ಮುಕ್ತಿ ಮಠ(ಮಲ್ಲಿಕಾರ್ಜುನ್) (ಬೆಳಗಾವಿ)
ಎಂ.ಮಲ್ಲೇಶ್ವರ (ಬೆಂಗಳೂರು ಜಿಲ್ಲೆ)
ಅರುಣ.ಎನ್ (ಮಂಡ್ಯ ಜಿಲ್ಲೆ)
ಕಸ್ತೂರಿ ಕಿರಣ ಅಂಕಣಕಾರರು
ಎಸ್.ಎಸ್.[illegible]
ಪ್ರೊ. ಎಂ.ಎಂ.ಮಾಸೂಲ್ದಾರ

ಕಾನೂನು ಸಲಹೆಗಾರರು
ಸಂಜಯ.ಎಸ್.ಕುಲಕರ್ಣಿ
B.Com,LLB,Dip(CyberLaw)
ವಕೀಲರು, ಉಚ್ಚ ನ್ಯಾಯಾಲಯ ಬೆಂಗಳೂರು

ಮುದ್ರಣ
ನಂದಿನಿ ಗ್ರಾಫಿಕ್ಸ್ ನಿರ್ಣಾ
ಪಿ.ಜಿ.ನಂ.01,ಅಂಚೆ.ನಿರ್ಣಾ,ಜಿ.ಬೀದರ್
ಕಸ್ತೂರಿ ಕಿರಣ ಚಂದಾ ವಿವರ
(ಅಂಚೆ ವೆಚ್ಚ ಸೇರಿ)

| | |
|---|---|
| ಬಿಡಿ ಪ್ರತಿ: | ರೂ. 10/- |
| ವಾರ್ಷಿಕ ಚಂದಾ: | ರೂ. 240/- |
| ದ್ವೈ ವಾರ್ಷಿಕ ಚಂದಾ: | ರೂ. 480/- |
| ಪಂಚ ವಾರ್ಷಿಕ ಸದಸ್ಯತ್ವ | ರೂ.1200/- |
| ಆಜೀವ ಸದಸ್ಯತ್ವ: | ರೂ.10,000/- |
| ಮಹಾ ಪೋಷಕರು: | ರೂ.25,000/- |

ಓದುಗರು ಚಂದಾ ಹಣ ಕಸ್ತೂರಿ ಕಿರಣ ಪತ್ರಿಕೆಯ ಬ್ಯಾಂಕ್ ಖಾತೆ ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ- **35423936449,(IFSCCode SBIN 0004611)** ಗೆ ಜಮಾ ಮಾಡಬಹುದು ಅಥವಾ ಎಂ.ಓ. /ಡಿ.ಡಿ. ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಪತ್ರಿಕೆ ಪಡೆಯಬಹುದು



**ಪತ್ರಿಕಾ ಕಾರ್ಯಾಲಯ ವಿಳಾಸ**
ಸಂಪಾದಕರು,ಕಸ್ತೂರಿ ಕಿರಣ
ಪಿ.ಜಿ.ನಂ.01,ಅಂಚೆ.ನಿರ್ಣಾ,ಜಿ.ಬೀದರ್,ಪಿನ್ ಕೋಡ್: 585227
**ಮೊ: 9880212946**
E-Mail:-kknews16@gmail.com


**ಅಂತರಾತ್ಮದ ಕಿರಣ**

ಹಸಿದ ಹೊಟ್ಟೆಗೆ ಜ್ಞಾನ ತುಂಬುವುದು ಮಹಾಪಾಪ – ಸ್ವಾಮಿ ವಿವೇಕಾನಂದ್


ಸೂಚನೆ: ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ವರದಿಗಳು ಆಯಾ ಲೇಖಕರ, ವರದಿಗಾರರ ಅಭಿಪ್ರಾಯಗಳಾಗಿರುತ್ತವೆ ಹಾಗೂ ಈ ಸಂಚಿಕೆಯಲ್ಲಿ ಪ್ರಕಟಿತ ಎಲ್ಲ ಜಾಹಿರಾತುಗಳ ಗುಣಮಟ್ಟ,ಸ್ವಾಸ್ಥ್ಯತೆ ಬಗ್ಗೆ ಓದುಗರು ನೇರವಾಗಿ ಜಾಹಿರಾತುದಾರರಿಂದ ವಿಚಾರಿಸಿಕೊಳ್ಳಬೇಕು. ವರದಿ, ಲೇಖನ,ಜಾಹಿರಾತುಗಳ ಸ್ವಾಸ್ಥ್ಯತೆಗೆ ಅವರುಗಳೇ ಹೊಣೆಗಾರರಾಗಿರುತ್ತಾರೆ ಪತ್ರಿಕೆ ಜವಾಬ್ದಾರಿಯಾಗಿರುವುದಿಲ್ಲ


# ಸಂಪಾದಕೀಯ.



ಆತ್ಮೀಯ ಓದುಗರಿಗೆ ನಮಸ್ಕಾರ.

ನಿಮ್ಮೆಲ್ಲರ ಶುಭ ಹಾರೈಕೆಯಿಂದ ನಿಮ್ಮ ಪ್ರೀತಿಯ ಈ ಸಂಚಿಕೆ ನಿಮ್ಮ ಕೈಸೇರಿಸಲು ಈ ಬಾರಿ ಸಂಪಾದಕ ಮಂಡಳಿಯಿಂದ ಸಾಧ್ಯವಾದದ್ದು ಬಹುಶ: ಬಹುದೊಡ್ಡ ಸಾಧನೆಯೆ ಎನಿಸಿದಂತಾಗಿದೆ.

ಮೂಲ ಕಾರಣ ಕೊವೀಡ್ -೧೯ ವೈರಾಣುವಿನ ರುದ್ರನರ್ತನಕ್ಕೆ ನಾನು ಒಳಗಾಗಿರುವುದು. ಒಂದು ವಾರ ಚಿಕಿತ್ಸೆ ಪಡೆದು ಫಲಕಾರಿಯಾಗಿ ಹೊರಬಂದ ನಂತರ ಸಂಪಾದಕ ಮಂಡಳಿ ಮತ್ತೆ ಎಂದಿನಂತೆ ಉತ್ಸಾಹದಲ್ಲಿ ಈ ಸಂಚಿಕೆಯ ಮುದ್ರಣ ಕಾರ್ಯ ಪೂರ್ಣಗೊಳಿಸಿದ್ದಾರೆ. ಎಲ್ಲರಿಗೂ ಕೃತಜ್ಞನಾಗಿರುವೆ.

ಆತ್ಮೀಯರೆ ಬೆಸಿಗೆ ಕಾಲವಾಗಿದ್ದರೂ ನಿತ್ಯ ಕೊವೀಡ್ ಪ್ರಕರಣ ಹೆಚ್ಚುತ್ತಿವೆ. ಇದಕ್ಕೆ ಮೂಲ ಕಾರಣ ಅಂತರ ಕಾಯ್ದುಕೊಳ್ಳದಿರುವುದು,ಮುಖಗವಸು ಧರಿಸದಿರುವುದು, ಸ್ವಚ್ಛತೆಗೆ ಆದ್ಯತೆ ನೀಡದಿರುವುದು ಎಂದು ತಜ್ಞ ವೈದ್ಯರೂ ಒತ್ತಿ ಹೇಳುತ್ತಿದ್ದಾರೆ.ಹೀಗಿದ್ದರೂ ನಾಗರಿಕರು ತೀರ ಸರಳವಾಗಿ ಪ್ರಕರಣದ ಬಗ್ಗೆ ನಿಷ್ಕಾಳಜಿ ವಹಿಸುವಂತಿರುವುದು ಕಂಡುಬರುತ್ತಿದೆ. ರೋಗಕ್ಕೆ ಬಲಿಯಾದ ಮೇಲೆ ಎಲ್ಲವೂ ಸರ್ಕಾರದ ಮೇಲೆ ಭಾರ ಹಾಕುತ್ತಾರೆ. ಹಾಗಾದರೆ ನಮ್ಮ ಆರೋಗ್ಯದ ಜವಾಬ್ದಾರಿ ನಮ್ಮದಲ್ಲವೇ.? ಎಲ್ಲವೂ ಸರ್ಕಾರದ್ದೆ ಆಗಿದ್ದಾಗ ಈ ಭೂಮಿಯ ಮೇಲೆ ಭಗವಂತ ನಮಗೆ ಜನ್ಮನೀಡಿದ್ದಾದರೂ ಎತಕ್ಕಾಗಿ.?

ನಮ್ಮ ಆರೋಗ್ಯ ನಮ್ಮ ಜವಾಬ್ದಾರಿ ಆಗಬೇಕು. ಸ್ವಯಂ ಜಾಗೃತರಾಗಿ ಕೊವೀಡ್ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರತಿ ನಾಗರಿಕ ಪಣತೊಟ್ಟು ಹೋರಾಟ ನಡೆಸಬೇಕಿದೆ. ಸರ್ಕಾರಕ್ಕೆ ಕೈ ಜೋಡಿಸಬೇಕೆ ವಿನ: ಬೆರಳು ತೋರಿಸುವ ಕೆಲಸ ಈ ಸಂಕಟದ ಪರಿಸ್ಥಿತಿಯಲ್ಲಿ ಮಾಡಬಾರದು ಈ ಆಶಯ ಎಲ್ಲರದ್ದಾಗಲಿ ಎಂದು ಶುಭಹಾರೈಸುವೆ.

.

ವಂದನೆಗಳೊಂದಿಗೆ..

ಇಂತು ನಿಮ್ಮಯ ವಿಶ್ವಾಸಿ
– ಪ್ರಧಾನ ಸಂಪಾದಕರು

## FORM IV

***Statement about ownership and other particulars about news paper KASTURI KIRAN to be published in the first issue every year after the last day of February***

| | | | |
|---|---|---|---|
| 1. | Place of publication | : | 01. Po.NIRNA, TALUK-HUMNABAD,BIDAR, KARNATAKA |
| 2. | Periodicity of its Publication | : | FORTNIGHTLY |
| 3. | Printer's Name | : | **VEERESH KUMAR** |
| | Nationality | : | INDIAN |
| | Address | : | NANDINI GRAPHICS PO.NIRNA, TALUKA- HUMNABAD,BIDAR, KARNATAKA |
| 4. | Pulisher's Name | : | **VEERESH KUMAR** |
| | Nationality | : | INDIAN |
| | Address | : | 01.PO.NIRNA,HUMNABAD,BIDAR,KARNATAKA |
| 5. | Editor's Name | : | **VEERESH KUMAR** |
| | Nationality | : | INDIAN |
| | Address | : | 01.PO.NIRNA,HUMNABAD,BIDAR,KARNATAKA |

6. Names and addresses of individuals who own the news paper and partners or shareholders holding More than once percent of the total capital.

I **VEERESH KUMAR** here by declare that the particulars given above are true to the best of my knowledge and belief.

Date. 15.03.2021 **Signature of Publisher**

# ಎಚ್ಚರಗೊಳ್ಳದ ಶಿಕ್ಷಣ ಇಲಾಖೆ: ವಾಸ್ತವ ತಿಳಿಯದ ಶಿಕ್ಷಣ ಸಚಿವ
# ಜೀವ ಭಯದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳು

**ಕಳೆದ ಒಂದು ವರ್ಷದಿಂದ ದೇಶಾದ್ಯಂತ ಕೋವಿಡ್ ಕಾರಣ ಜನರ ಜೀವನದ ಮೇಲೆ ಮಾರಕ ಪರಿಣಾಮ ಬೀರಿದೆ. ನಾಗರಿಕರು ಮಾನಸಿಕ ಹಿಂಸೆ ಜೊತೆಗೆ ಸಾಮಾಜಿಕ ಸಮಸ್ಯೆಗಳ ಸರಮಾಲೆಯಲ್ಲಿ ನಲುಗುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರ ಪ್ರತಿಶತ 80ಕ್ಕೂ ಹೆಚ್ಚು ಬಗೆಯ ಸಮಾಜದ ವಿವಿಧ ಸ್ತರಗಳಲ್ಲಿಯ ನಾಗರಿಕರಿಗೆ ಆರ್ಥಿಕವಾಗಿ ನೆರವಿಗೆ ಬಂದಿದೆ, ರಾಜ್ಯ ಸರ್ಕಾರವೂ ಈ ಕಾರ್ಯದಲ್ಲಿ ಹಿಂದೆ ಬಿದ್ದಿಲ್ಲ. ಈ ಎಲ್ಲವುಗಳ ಮಧ್ಯದಲ್ಲಿ ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯ ಪರಿಸ್ಥಿತಿ ತೀರ ವೇದನಾಮಯವಾಗಿದೆ. ಈ ಬಗ್ಗೆ ಯಾವ ಸರ್ಕಾರ ಗಮನ ಹರಿಸಿದೆ? ಬಹುಶ: ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಹಾಗೂ ಶಿಕ್ಷಣ ಸಚಿವರಿಗೆ ಖಾಸಗಿ ಅನುದಾನ ರಹಿತ ಶಾಲಾ ಆಡಳಿತಗಳು ಇವೆಯಾ ಎಂಬ ಅರಿವಾದರೂ ಇದೆಯಾ.? ಕಸ್ತೂರಿ ಕಿರಣ ಓದುಗರಿಗೆ ಸರ್ಕಾರಕ್ಕೆ ಮಾತು ಮೌನವಾದ ಘಳಿಗೆಯ ನುಡಿಗಳಿವು**




ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಎಲ್ಲರಿಗೂ ಸಮಾನವಾಗಿರಬೇಕು. ಸಾಮಾನ್ಯನಿಂದ ಉನ್ನತ ವ್ಯಕ್ತಿಯ ವರೆಗೂ ನೆಮ್ಮದಿಯ ಜೀವನ ಕಳೆಯುವ ವಾತಾವರಣ ನಿರ್ಮಿಸುವುದು ಆಳುವ ಪ್ರಭುಗಳು ಮಾಡಬೇಕಾಗಿರುವುದು ಆದ್ಯಕರ್ತವ್ಯ.

ವಿಷಯ ಹೀಗಿರುವಾಗ ರಾಜ್ಯದಲ್ಲಿ ಕಳೆದ ಮಾರ್ಚ್ 2020ರಿಂದ ಈ ವರ್ಷದ ಮಾರ್ಚ್ ವರೆಗೂ ಕೋವಿಡ್ ವಾತಾವರಣದ ಭಯದಲ್ಲಿ ನಾಗರಿಕರು ದಿನಗಳು ಕಳೆಯುವತ್ತಿರುವ ಕಾಲಘಟ್ಟದಲ್ಲಿ ಮುಖ್ಯವಾಗಿ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯವರು ನಿತ್ಯ ಪಡಬಾರದ ಸಂಕಷ್ಟ ಪಡುವ ಮೂಲಕ ಸರ್ಕಾರಕ್ಕೆ ಹಿಡಿ ಶಾಪ ಹಾಕುತ್ತ ದಿನಗಳು ಕಳೆಯುತ್ತಿರುವುದು ತೀರ ನೋವಿನ ಸಂಗತಿ.



ಶಿಕ್ಷಣ ಸಚಿವರು ವಿರೋಧ ಪಕ್ಷದವರು ಕಳೆದ ವರ್ಷ ತನ್ನ ಮೇಲೆ ಆರೋಪ ಮಾಡುತ್ತಿದ್ದಾರೆ ಎಂಬ ಅಂತರಾಳದ ಹೆದರಿಕೆಯಿಂದ ಸಂಪೂರ್ಣವಾಗಿ ಅಧಿಕಾರದ ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಅವರೇ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಆರೋಪ ಪ್ರತಿ ಆರೋಪಗಳ ಮಧ್ಯ ವ್ಯವಸ್ಥೆ ಬಲಿಕೊಡುವುದಕ್ಕಿಂತಲು ಶುದ್ಧ ತೆರವು ಮಾಡುವುದು ಸೂಕ್ತ ಎನಿಸುತ್ತದೆ ಪ್ರಜಾಪ್ರಭುತ್ವದ ಆಡಳಿತಕ್ಕೆ. ಸರ್ಕಾರಕ್ಕೆ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳು ಬೇಡವೇ ಆಗಿದ್ದಲ್ಲಿ ನೇರವಾಗಿ ಸಾಮುಹಿಕವಾಗಿ ಸುಗ್ರಿವಾಜ್ಞೆ ಹೊರಡಿಸಿ ಶಾಲೆಗಳು ಮುಚ್ಚಿಸಬೇಕು ಆದರೆ ಈ ರೀತಿ ಚಿತ್ರ ಹಿಂಸೆ ಕೊಡುವುದು ಎಷ್ಟು ಸಮಂಜಸ.?ಯಾವ ಕಾರಣಕ್ಕೆ ಈ ಹಿಂಸೆ ? ಶಾಲಾ ಆಡಳಿತ ಮಂಡಳಿಯವರು ಪ್ರಜ್ಞಾವಂತ ರಾಷ್ಟ್ರ ನಿರ್ಮಾಣ ಮಾಡುವ ಕಾರ್ಯಕ್ಕೆ ಪೂರಕವಾಗಿ ಶ್ರಮಿಸುತ್ತಿಲ್ಲವೇ.? ಕೇವಲ ಬೆರಳೆಣಿಕೆಯಷ್ಟು ದೊಡ್ಡ ಶಹರ, ನಗರ ಪ್ರದೇಶಗಳಲ್ಲಿಯ ಖಾಸಗಿ ಆಡಳಿತ ಮಂಡಳಿಯವರು ಆನ್‌ಲೈನ್ ತರಗತಿ ಮೂಲಕ ಪಾಲಕರಿಂದ ಹಣ ಸಂಪಾದಿಸುತ್ತಿಬಹುದು ಹಾಗಂತ ಸರ್ಕಾರ ಅದನ್ನೇ ಮೂಲ ಗುರಿಯನ್ನಾಗಿಸಿಕೊಂಡು ಪ್ರತಿಬಾರಿಯೂ ಕಾಮಾಲೆ ಕಣ್ಣಿನಿಂದ ಖಾಸಗಿ ಅನುದಾನ ರಹಿತ ಎಲ್ಲ ಶಾಲೆಗಳ ವಿಷಯ ನೋಡುವುದು ಹಾಸ್ಯಾಸ್ಪದವಾಗುತ್ತದೆ.

ಪ್ರತಿಶತ ೮೦ ರಷ್ಟು ಗ್ರಾಮೀಣ ಭಾಗದ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯವರು ಇಂದು ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದಾರೆ. ಒಬ್ಬ ಪಾಲಕರಿಂದಲೂ ಒಂದು ಪೈಸೆಯು ಪಡೆಯದೇ ಕೋವಿಡ್ ಕಾಲದಲ್ಲಿ ಮಕ್ಕಳಿಗೆ ನಿತ್ಯ ಬೋಧನೆ ನಡೆಸುತ್ತಿದ್ದಾರೆ. ಈ ವಿಷಯ ಸಚಿವರ ಗಮನಕ್ಕೆ ಬರುವುದಿಲ್ಲವೇ.? ಕೇವಲ ಖಾಸಗಿ ಶಾಲೆಗಳ ಬಗ್ಗೆ ಮಾತು ಬಂದಾಗಲೆಲ್ಲ ನಕಾರಾತ್ಮಕವಾಗಿ ಮಾತನಾಡುವ ಸಚಿವರಿಗೆ ಇಲಾಖೆಯ ಸಮಗ್ರ ಚಿಂತನ ಮಂಥನ ಮಾಡುವ ವ್ಯವಧಾನವೇ ಇಲ್ಲವಾಗಿದೆ. ಬಿಸಿಲ ಕುದುರೆಯಾಗಿದ್ದಾರೆ.

ನನಗೆ ಯಾರಿಂದಲೂ ಆರೋಪ ಬರಬಾರದು. ಯಾರು ನನಗೆ ಬೆರಳು ಮಾಡಿ ತೋರಿಸಬಾರದು ಎಂಬ ಏಕೈಕ ನಿರ್ಧಾರದಿಂದಲೇ ಸಚಿವರು ಈ ರೀತಿ ಖಾಸಗಿ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ವಿರುದ್ಧ ಮಾತನಾಡುತ್ತಿದ್ದಾರೆ ಎಂಬುದು ಎಲ್ ಕೆ ಜಿ ತರಗತಿಯ ಮಗುವಿಗೂ ಅರ್ಥವಾಗುತ್ತಿದೆ ಆದರೆ ಈ ವಾಸ್ತವ ಸತ್ಯ ಮಾತ್ರ ಸಚಿವರು ಅರ್ಥಮಾಡಿಕೊಳ್ಳುತ್ತಿಲ್ಲ. ಇವರ ಈ ನಿರ್ಧಾರದಿಂದ ಬಿಜೆಪಿ ಸರ್ಕಾರಕ್ಕೂ ಪರೋಕ್ಷವಾಗಿ ಧಕ್ಕೆ ಆಗಿದೆ ಆಗುತ್ತಿದೆ. ಈಗಲಾದರೂ ಸಚಿವರು ತಮ್ಮ ಸ್ವಾರ್ಥ ಸಾಧನೆಯ ನಿರ್ಧಾರ ಬಿಟ್ಟು ಸಮಗ್ರ ಚಿಂತನೆಯ ಕಡೆ ಮನಸ್ಸು ಹರಿಸಬೇಕಿದೆ.

ಜೂನ್ ತಿಂಗಳಲ್ಲಿ ಖಾಸಗಿ ಶಾಲೆಯವರಿಗೆ ಪ್ರವೇಶ ನಿರಾಕರಿಸಿದ ಇಲಾಖೆ ತರಾತುರಿಯಲ್ಲಿ ಬಹುದೊಡ್ಡ ಸಾಧನೆ ಮಾಡಿದಂತೆ ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಪಾಲಕರ ಮನೆಗಳಿಗೆ ಭೂ ಬಿಟ್ಟು ಎಲ್ಲ ಮಕ್ಕಳ ಪ್ರವೇಶ ಸ್ರಕಾರಿ ಶಾಲೆಗಳಲ್ಲಿ ಪಡೆದರು. ಏಕೆ ಈ ತಾರತಮ್ಯ ನೀತಿ .?

(ಪುಟ-5ಕ್ಕೆ ಮುಂದುವರೆದಿದೆ)

# ಅನುದಾನ ರಹಿತ ಶಾಲೆಗಳಿಗೆ ಸರ್ಕಾರ ಜೀವ ಜಲ ನೀಡುವುದೇ.? ಅಥವಾ ಸಚಿವರ ಜಿದ್ದಿನ ಜಾತ್ರೆಯಲ್ಲಿ ವಿಷ ಉಣಿಸುವುದೇ.?

ಪುಟ -4 ರಿಂದ ಮುಂದುವರೆದದ್ದು...

**ಕಳೆದ ಒಂದು ವರ್ಷದಿಂದ ಸಾವು ಬದುಕಿನ ಮಧ್ಯೆ ಸಿಬ್ಬಂದಿಯವರ ಸಂಕಟಕ್ಕೆ ತಕ್ಕಷ್ಟು ಸಾಲ ಸೂಲ ಮಾಡಿಕೊಂಡು ಖಾಸಗಿ ಶಾಲಾ ಆಡಳಿತ ಮಂಡಳಿ ತನ್ನಿಂದಾದಷ್ಟು ಸಂಬಳ ಕೊಡುತ್ತ ಮಕ್ಕಳ ಪಾಲಕರಿಂದ ಒಂದು ಪೈಸೆಯೂ ಪಡೆಯದೇ ಶಾಲೆ ನಡೆಸಿಕೊಂಡು ಬರುತ್ತಿವೆ. ಈಗಲಾದರೂ ಶಿಕ್ಷಣ ಸಚಿವರು ಮೊಂಡು ಸ್ವಾಭಿಮಾನ ಬಿಟ್ಟು ಆಡಳಿತ ಮಂಡಳಿಗೆ ಇಲ್ಲವಾದರೂ ಶಿಕ್ಷಕರ ನೆರವಿಗಾದರೂ ಬರಬಹುದೇ? ಭಗವಂತ ಅವರಿಗೆ ಸಾಕ್ಷಾತ್ಕಾರದ ವರ ಕರುಣಿಸಬಹುದೇ? ಕಾದು ನೋಡಬೇಕಿದೆ. ಕೇವಲ ಗೊಂದಲಗಳ ಹೇಳಿಕೆ ಜಿದ್ದು ಸ್ವಯಂ ಪ್ರತಿಷ್ಠೆಗೆ ಮಾತ್ರ ಸಚಿವ ಸ್ಥಾನ ಕಳೆದ ಒಂದು ವರ್ಷದಿಂದ ಉಳಿದುಕೊಂಡಿದೆ ಆದರೆ ಈ ವಾಸ್ತವ ತಥ್ಯ ತಿಳಿಸುವವರಾದರೂ ಯಾರಿದ್ದಾರೆ ಪಕ್ಷದಲ್ಲಿ? ವಿರೋಧ ಪಕ್ಷದವರಂತು ಇವರ ಡೊಂಬರಾಟ ನೋಡಿ ಮುಗುಳುನಗೆ ಬಿರುತ್ತಿರುವುದಂತು ಪ್ರತಿಶತ 100 ರಷ್ಟು ಸತ್ಯ.**

ಈ ವರ್ಷ ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಮಕ್ಕಳಿಗೆ ಪ್ರವೇಶ ಪಡೆಯಲು ಸರ್ಕಾರ ಅವಕಾಶವೇ ಕೊಡಲಿಲ್ಲ. ಕೇವಲ ಎಲ್ಲ ಮಕ್ಕಳಿಗೂ ಸರ್ಕಾರಿ ಶಾಲೆಗಳಲ್ಲಿಯೇ ಪಡೆದುಕೊಂಡಿವೆ ಅದು ಜಿದ್ದಾಜಿದ್ದಿನ ಮೇಲೆ. ದೇಶದಲ್ಲಿ ಜೀವ ಭಯದ ದಳ್ಳುರಿ ಹೊತ್ತಿ ಉರುಯುತ್ತಿರುವಾಗ ರಾಜ್ಯದ ಶಿಕ್ಷಣ ಸಚಿವರು ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ವಿರುದ್ಧ ತಮ್ಮ ಸಾವಿರ ವರ್ಷದ ವೈರತ್ವದ ಸೇಡು ತೀರಿಸಿಕೊಂಡಂತೆ ಸಾಧಿಸಿ ಜಯಶಾಲಿಗಳಾಗಿದ್ದಾರೆ. ಇರಲಿ ಆದರೆ ಈಗ ಸಚಿವರಿಗೂ, ಶಿಕ್ಷಣ ಇಲಾಖೆಗೂ ಬಹುದೊಡ್ಡ ಸವಾಲು ಬಂದಿದೆ. ಪ್ರವೇಶ ರಹಿತ ಶೈಕ್ಷಣಿಕ ವರ್ಷ ಮುಂದಿನ 10 ವರ್ಷಗಳ ವರೆಗೂ ಸಮಸ್ಯೆಯಲ್ಲಿಯೇ ಶಾಲೆಗಳು ಕಳೆಯಬೇಕಾಗುತ್ತವೆ. ಶಾಲಾ ಮಾನ್ಯತೆ ನವೀಕರಣ ಕಾಲದಲ್ಲಿಯೂ ತರಗತಿಯಲ್ಲಿ ದಾಖಲಾತಿ ಇರುವುದಿಲ್ಲ ಆಗ ಹೇಗೆ ಮಾಡುವುದು.? ಈ ಸಚಿವರು ಆ ಕಾಲದಲ್ಲಿ ಯಾವ ಮೂಲೆಯಲ್ಲಿ ಇರುತ್ತಾರೆ ಯಾರುಗೆ ತಾನೆ ಗೊತ್ತು.?

ಇವರ ಜಿದ್ದಿನ ಹಟಕ್ಕೆ ವ್ಯವಸ್ಥೆಯೇ ಬಲಿಯಾಗಬೇಕಾಗಿದೆಯಲ್ಲವೇ.? ಕೇವಲ ಜಿದ್ದಿನ ಪರೀಕ್ಷೆ ನಡೆಸಿದ ಯಶಸ್ಸು ನಿಜವಾದ ಯಶಸ್ಸು ಆಗುವುದಿಲ್ಲ ಬದಲಾಗಿ ಅದು ಆಡಳಿತ ವ್ಯವಸ್ಥೆಗೆ ಮಾರಕವೂ ಆಗುತ್ತದೆ ಎಂಬುದಕ್ಕೆ ಈ ಒಂದು ನಿದರ್ಶನ ಸಾಕಲ್ಲೆ.?

ಸಚಿವ ಸುರೇಶ್ ಕುಮಾರ ಅವರು ಒಂದು ವರ್ಷದಲ್ಲಿ ಎಷ್ಟು ಬಾರಿ ಖಾಸಗಿ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿ ಅಥವಾ ಶಾಲಾ ಶಿಕ್ಷಕರ ಬಗ್ಗೆ ಕನಿಕರದ ಮಾತುಗಳು ಆಡಿದ್ದಾರೆ.? ಎದೆ ತಟ್ಟಿ ಒಮ್ಮೆ ಹೇಳಲಿ ನೋಡೋಣ.?

ಬಾಯಿ ತೆರೆದರೆ ಕೇವಲ ವಿರೋಧದ ಮಾತುಗಳೇ ಆಡುವ ಇವರು ನಿಜವಾಗಲೂ ಶಿಕ್ಷಣವಂತ ಶಿಕ್ಷಣ ಸಚಿವರಾ.? ಎಂಬ ಅನುಮಾನ ಬರುತ್ತಿದೆ.

ಇವರಿಗೆ ಸಂಪೂರ್ಣ ಅಧಿಕಾರ ಇದ್ದಲ್ಲಿ ಅಧಿಕಾರದ ವ್ಯಾಪ್ತಿ ಬಳಸಿಕೊಂಡು ರಾಜ್ಯ ಖಾಸಗಿ ಶಾಲೆ ಮುಕ್ತವನ್ನಾಗಿಯಾದರೂ ಘೋಷಣೆ ಮಾಡಲಿ ಆಗಲಾದರೂ ಇವರ ಆತ್ಮಕ್ಕೆ ಶಾಂತಿ ಸಿಗಬಹುದೇನೋ.!

**ಕಲ್ಬುರ್ಗಿ ಜಿಲ್ಲೆಯಲ್ಲಿ ಈಚೆಗಷ್ಟೆ ಖಾಸಗಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಸಾಲಕ್ಕೆ ಬೆಸತ್ತು ನೇಣು ಹಾಕಿಕೊಂಡ ಘಟನೆ ಹಸಿಯಾಗಿಯೆ ಇದೆ ಈಗಲಾದರೂ ಸಚಿವರು ಎಚ್ಚೆತ್ತುಕೊಳ್ಳಬೇಕು ಅಥವಾ ಮುಖ್ಯಮಂತ್ರಿಗಳು ಶಿಕ್ಷಣ ಖಾತೆಗೆ ಅನುಸರಿಸುತ್ತಿರುವ ಮೌನ ಬಿಟ್ಟು ಮಾತು ಆಡುವ ಮೂಲಕ ರಾಜ್ಯದ ಎಲ್ಲ ಅನುದಾನ ರಹಿತ ಆಡಳಿತ ಮಂಡಳಿಗಳಿಗೆ ಜೀವ ಜಲ ನೀಡುವ ಕಾರ್ಯ ಆರಂಭಿಸಬೇಕು ಅಥವಾ ಸಚಿವ ಸ್ಥಾನ** ಬದಲಾವಣೆ ಮಾಡುವುದು ಸರ್ವ ಸೂಕ್ತ ಎಂಬ ಮಾತು ಅತೀವ ನೋವಿನಿಂದ ಹೇಳಲೇಬೇಕಿದೆ.

**ಯಾವುದೇ ಜನ ಪ್ರತಿನಿಧಿ ಜಾನನ ಸಮಸ್ಯೆಗೆ ಸ್ಪಂದನೆಯೇ ನಡೆಸುವುದಿಲ್ಲ ಎಂದ ಮೇಲೆ ಆತ ಆ ಹುದ್ದೆಯಲ್ಲಿ ಮುಂದು ವರೆಯುವುದು ಸೂಕ್ತ ಎನಿಸದು ಎಂಬುದ್ದು ರಾಜನೀತಿ ಹೇಳುತ್ತದೆ.**

ಎಲ್ಲವೂ ಸಚಿವರ ಮೇಲೆ ಆರೋಪ ಮಾಡುತ್ತಿಲ್ಲ ಆದರೆ ಎಲ್ಲವೂ ನಿಯಂತ್ರಣವಂತು ಸಚಿವರು ಏಕ ಮುಖದ ನಿರ್ಧಾರದಲ್ಲಿ ಮಾಡುತ್ತಿರುವುದು ಸತ್ಯವಾಗಿರುವುದರಿಂದ ಈ ಎಲ್ಲ ಪ್ರಶ್ನೆಗಳು ಅವರ ನಡೆನುಡಿಗಳ ಸುತ್ತಲೂ ಜನ್ಮತಾಳಿಕೊಳ್ಳುತ್ತಿರುವುದು ಸಹಜವೇ ಏಕೆಂದರೆ ಸಚಿವರು ರಾಜ್ಯದ ಜನತೆಯ ಇಲಾಖೆಯ ಆಸ್ತಿಯಾಗಿದ್ದಾರೆ. ಆದರೆ ಅವರು ಮಾತ್ರ ವೈಯಕ್ತಿ ವರ್ಚಸ್ಸಿಗೆ ಧಕ್ಕೆ ಬರಬಾರದು ಎಂಬ ಏಕೈಕ ಸ್ವಾರ್ಥ ನಿರ್ಧಾರದಿಂದ ತಮಗೆ ತಿಳಿಯದಂತೆ ತಮ್ಮ ಸುತ್ತಲು ಜನ ಬಲೆ ಎಳೆದುಕೊಳ್ಳುತ್ತಿರುವುದು ನಿಜವಿದೆ. ರಾಜ್ಯ ಸರ್ಕಾರಕ್ಕೆ ಈಗಾಗಲೇ ಇವರ ಹಲವು ಗೊಂದಲಗಳ ಹೇಳಿಕೆ ನಿರ್ಧಾರಗಳಿಂದ ಬಹುದೊಡ್ಡ ಹೊಡೆತ ಬಿದ್ದದ್ದು ಬೀಳುತ್ತಿರುವುದಂತು ನಿತ್ಯವೂ ಸತ್ಯವಾಗುತ್ತಿದೆ.


**ಈ ಕ್ಷಣವೇ ಆತ್ಮ ಸಾಕ್ಷಿ ಇದ್ದಲ್ಲಿ ರಾಜ್ಯದ ಎಲ್ಲ ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ ಕನಿಷ್ಠ ಕೋವಿಡ್ ವೇತನ ಬಿಡುಗಡೆ ಮಾಡಬೇಕು ಶಿಕ್ಷಣ ಸಚಿವರು. ಇದು ಅವರ ಆದ್ಯ ಕರ್ತವ್ಯ ಕೂಡ.**

ತಾಳ್ಮೆಯ ಕಟ್ಟೆ ಒಡೆಯುವ ಮೊದಲು ಎಚ್ಚೆತ್ತುಕೊಂಡಲ್ಲಿ ಅವರಿಗೆ ಒಳಿತಾಗುತ್ತದೆ ಇಲ್ಲವಾದಲ್ಲಿ ತಮ್ಮ ಬೆನ್ನು ತಾವು ಚಪ್ಪರಿಸಿಕೊಳ್ಳುವ ಸಚಿವರ ಸಾಲಿಗೆ ಪ್ರಥಮ ಹೆಸರು ಇವರದಾಗುತ್ತದೆ.

**ಸಾರಾಯಿ ಅಂಗಡಿ ಎದುರಿಗೆ ಭಜಿ ಮಾರಾಟ ಮಾಡುವ ಕಾರ್ಮಿಕನಿಗೆ ಸರ್ಕಾರ ಸಂಭಾವನೆ ನೀಡುತ್ತದೆ ಆದರೆ ರಾಷ್ಟ್ರ ನಿರ್ಮಾಣ ಮಾಡುವ ಆದರ್ಶ ಖಾಸಗಿ ಶಾಲಾ ಶಿಕ್ಷಕರಿಗೆ ಬಿಡಿಗಾಸು ಕೊಡುವುದಿಲ್ಲ ಎಂದ ಮೇಲೆ ಇದು ಯಾವ ಪ್ರಜಾಪ್ರಭುತ್ವ ಇದು ಯಾವ ಆಡಳಿತ ವ್ಯವಸ್ತೆ.? ಪ್ರಜ್ಞಾವಂತ ನಾಗರಿಕ ನೇರವಾಗಿ ಸರ್ಕಾರಕ್ಕೆ ಪ್ರಶ್ನೆ ಮಾಡುವ ಕಾಲ ಘಟ್ಟ ಇದಾಗಿದೆ.** ಈ ಬಗ್ಗೆ ವಿರೋಧ ಪಕ್ಷದವರೂ ಕೂಡ ಚಕಾರ ಎತ್ತುತ್ತಿಲ. ಇಂತಹ ಮಲತಾಯಿ ಮೌನ ಬಿಟ್ಟು ವಿಶಾಲ ಮನೋಭಾವ ಬೆಳಸಿಕೊಂಡಾಗಲೆ ಸಮಾಜ ಸಮಗ್ರ ಪ್ರಗತಿ ಸಾಧ್ಯವಾಗುತ್ತದೆ. **ನಿಸ್ವಾರ್ಥ ಬೇಕು. ಸ್ವಾರ್ಥ ಬೇಡ. ಸ್ವಾರ್ಥ ಬೇಕು ಎಂಬುವುದೇ ನಿಮ್ಮ ಉದ್ದೇಶ ಆಗಿದ್ದಲ್ಲಿ ಅಧಿಕಾರ ಬಿಡಿ ಎಂಬುದ್ದು ನಾಗರಿಕರ ಕೂಗಾಗಿದೆ. ಗಮನಿಸಿ.**

ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಸೇವೆ ಸಲ್ಲಿಸುವ ಶಿಕ್ಷಕರ ಬದುಕಿಗೆ ಬೆಲೆ ಯಾರು ತಾನೆ ಕಟ್ಟಬೇಕು.? ಇವರ ಸಂರಕ್ಷಣೆಗೆ ಸರ್ಕಾರ ಮುಂದೆ ಬರಬಾರದು ಎಂಬ ಕಾನೂನು ಸುರೇಶ್ ಕುಮಾರ ರಚಿಸಿದ್ದಾರಾ.? ಅದು ಅವರ ಸ್ವಂತ ಕಾನೂನೇ.?

– ಅಕ್ಷಜ್




ಕಸ್ತೂರಿ ಕಿರಣ ಪತ್ರಿಕೆಯ ಓದುಗರ ಅಭಿರುಚಿಯಂತೆ ಓದುಗರ ಪ್ರಶ್ನೆಗಳಿಗೆ ಉತ್ತರಿಸುವ ಅಂಕಣ ಮಂಥನ ಆರಂಭಿಸಿದ್ದು, ಪ್ರತಿ ಸಂಚಿಕೆಯ ಮಂಥನದಲ್ಲಿ ಸಂಪಾದಕೀಯ ಮಂಡಳಿಯ ಮೆಚ್ಚುಗೆ ಪಡೆದ ಒಂದು ಪ್ರಶ್ನೆಗೆ ರೂ 100/- ನಗದು ಬಹುಮಾನ ಕೊಡಲಾಗುತ್ತಿದೆ. ನಿಮ್ಮ ಚಿಕ್ಕದಾದ ಚೊಕ್ಕದಾದ ಪ್ರಶ್ನೆ ಪೋಸ್ಟ್ ಕಾರ್ಡಿನಲ್ಲಿ ಅಥವಾ ಈ ಮೇಲ್ ಮೂಲಕ ಪ್ರಶ್ನೆ ಕಳಿಸಬೇಕು, ಜೊತೆಗೆ ನಿಮ್ಮ ಪೂರ್ಣ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಬರೆಯುವುದು ಕಡ್ಡಾಯ. ವಿಳಾಸ: ಸಂಪಾದಕರು, ಕಸ್ತೂರಿ ಕಿರಣ ಪತ್ರಿಕೆ, ಮಂಥನ ವಿಭಾಗ, ಪಿ.ಜಿ.ಸಿ.ಆರ್, ಅಂಚೆ, ಸಿಂಧನೂರು, ಜಿಲ್ಲೆ ರಾಯಚೂರು ಪಿನ್ ಕ್ರಮಾಂಕ 585227. ಇ-ಮೇಲ್ kknews16@gmail.com

| | |
|---|---|
| ಪ್ರ- ವರ್ಷ ಕಳೆದರು ಹರ್ಷ ಮೂಡುತ್ತಿಲ್ಲ ಬದುಕಿನಲ್ಲಿ.?<br>-ಪ್ರಜ್ಞಾ, ಭದ್ರಾವತಿ<br>ಉ:- ಬದುಕು ಹಸನಾಗಬೇಕು ಎಂಬ ಕಲ್ಪನೆ ಯಾರಿಗೆ ತಾನೆ ಇದೆ.! | ಪ್ರ- ಮಕ್ಕಳ ಮುಂದಿನ ಗತಿ ? - ಅರುಣ ಕುಮಾರ್, ರಾಯಚೂರ್<br>ಉ:- ದೇವರೇ ಕಾಪಾಡಬೇಕು ಸಾರ್.! |
| ಪ್ರ- ಪ್ರಾಮಾಣಿಕತೆ ಎಲ್ಲುಂಟು ಸಾರ್.? -ರಾಜಕುಮಾರ್, ಬಾಗಲಕೋಟ್<br>ಉ:- ನಿಮ್ಮ ಅಂತರಾತ್ಮದಲ್ಲಿ ಮೂರನೇ ಕಣ್ಣು ತೆರೆದು ನೋಡಿ..! | ಪ್ರ- ಬೇಸಿಗೆ ಹೇಗೆ.?- ಸಂಜಯ್ , ಸೊಲಾಪುರ್<br>ಉ: ಆತಂಕದಲ್ಲಿ ಇರುವಹಾಗಿದೆ.ಜಾಗೃತರಾಗಿ ಬದುಕು ಕಾಪಾಡಿಕೊಳ್ಳಿ |
| ಪ್ರ- ನಿಮ್ಮ ಬರಹದಲ್ಲಿ ನೇರ ನುಡಿಗಳೇಕೆ ಸಾರ್ ,? - ಅರುಣ, ಹುಬ್ಬಳ್ಳಿ<br>ಉ:- ಸುಳ್ಳು ಬಿಳ್ಳು ಡಂಬರಾಟ ಎಲ್ಲವೂ ಅನುಮಾನಕ್ಕೆ ಕಾರಣ ಅಲ್ವಾ..? | ಪ್ರ- ಸಮಾಜಕ್ಕೆ ಎಂತಹ ನಾಯಕ ಬೇಕು ಗುರುವೇ..? ರಂಗರಾಜು, ಶಿವಮೊಗ್ಗ<br>ಉ:- ನಾಯಕ ಎಂತವರಾದ್ರೇನು ಆಳುವವರು ಸರಿ ಇಲ್ಲದಿದ್ದರೆ..! |
| **ರೂ.100 ಬಹುಮಾನ ಪಡೆದ ಪ್ರಶ್ನೆ**<br>ಪ್ರ: ಶಿಕ್ಷಣ ಸಚಿವರಿಗೆ ಖಾಸಗಿ ಶಾಲೆಗಳ ಮೇಲೆ ಏಕೆ ಮುನಿಸು ಸರ್..?<br>- ಧನರಾಜ್,ವಿಜಯಪುರ್<br>ಉ: ಕನ್ನಡಮ್ಮನ ಮಲತಾಯಿ ಮಗನಿರಬಹುದು.! | ಪ್ರ- ಚುನಾವಣೆ ಪ್ರಚಾರಕ್ಕೆ ಕೋವಿಡ್ ಆತಂಕವಿಲ್ಲವೇ ?<br>–ರಮೇಶ್, ಗಂಗೋತ್ರಿ<br>ಉ: ಜನರ ಮೇಲೆ ರಾಜಕೀಯ ಮಾಡೋರಿಗೆಕೆ ಆ ಚಿಂತೆ ಸಾರ್..! |


# ಕೇವಲ ರೂ.3899/-ಕ್ಕೆ

## ಸೋಲಾರ್ ಮೊಬೈಲ್ ಚಾರ್ಜರ್ ಖರಿದಿಸಿ

### ಎಲ್ಲೆಂದರಲ್ಲಿ ಯಾವಾಗ ಬೇಕು ಆಗ ಮೊಬೈಲ್ ಚಾರ್ಜ್ ಮಾಡಿಕೊಳ್ಳಿ

-: ಸೋಲಾರ ಚಾರ್ಜರ್ ವೈಶಿಷ್ಟ್ಯಗಳು:-

1. ಹೆಚ್ಚಿನ ಪರಿವರ್ತನೆ ದರ ಉತ್ತಮ ಗುಣಮಟ್ಟದ ಮೋನೊಕ್ರಿಸ್ಟಲಿನ್ ಸಿಲಿಕಾನ್ ಚಿಪ್ ಸೌರಶಕ್ತಿಯ 85% ವರೆಗೆ ಶಕ್ತಿಯಾಗಿ ಪರಿವರ್ತಿಸುತ್ತದೆ; ಏಕಕಾಲದಲ್ಲಿ ಸಾಧನಗಳಿಗೆ ಅನುಕೂಲಕರವಾಗಿ ಶುಲ್ಕ ವಿಧಿಸಿ, ಕ್ಯಾಂಪಿಂಗ್, ಕ್ಲೈಂಬಿಂಗ್, ಹೈಕಿಂಗ್ ಮತ್ತು ಹೆಚ್ಚಿನ ಯಾವುದೇ ಹೊರಾಂಗಣ ಚಟುವಟಿಕೆಗಳಿಗೆ ಉತ್ತಮವಾಗಿದೆ, ಎಲ್ಲೆಂದರಲ್ಲಿ ಸೋಲಾರ್ ಚಾರ್ಜರ್ ದಿಂದ ಮೊಬೈಲ್, ಡಿವೈಸ್ ಮತ್ತಿತರ ಸಾಧನಗಳು ಚಾರ್ಜ್ ಮಾಡಿಕೊಳ್ಳಲು ಅತ್ಯಂತ ಉತ್ತಮ ಸಾಧನವಾಗಿದೆ.



2.ಪೋರ್ಟಬಲ್ ಮತ್ತು ಲೈಟ್ವೈಟ್ ಅಲ್ಟ್ರಾ-ತೆಳುವಾದ ಮತ್ತು ಮಡಿಸಬಹುದಾದ ವಿನ್ಯಾಸವು ಸಾಗಿಸಲು ಸುಲಭವಾಗಿದೆ; ಐಹೋಲ್‌ಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಿ ಮತ್ತು ನೀವು ಹೊರಗೆ ಹೋದಾಗಲೆಲ್ಲಾ ಅದನ್ನು ನಿಮ್ಮ ಬ್ಯಾಗ್, ಬಾಡಿ ಅಥವಾ ಮೈ ಮೇಲೆ ಇಟ್ಟುಕೊಳ್ಳಬಹುದು

3.DIRT & SPLASH-PROOF ಪೋರ್ಟಬಲ್ ಸೌರ ಚಾರ್ಜರ್ ಐಪಿಎಕ್ಸ್ 4 ಜಲನಿರೋಧಕ ದರವನ್ನು ಹೊಂದಿದೆ, ಇದು ನೀರು ಮತ್ತು ಧೂಳನ್ನು ಸಿಂಪಡಿಸಲು ನಿರೋಧಕವಾಗಿದೆ, ಇದು ಹೊರಾಂಗಣ ಬಳಕೆಗೆ ಸೂಕ್ತವಾಗಿದೆ

ನಿರ್ದಿಷ್ಟತೆ: ಗಾತ್ರ: 4 ಫಲಕಗಳು: 450 * 155 * 30 ಮಿಮೀ, 5 ಫಲಕಗಳು: 550 * 155 * 35 ಮಿಮೀ ಬಣ್ಣ: ಕಪ್ಪು, ಚಿಪ್: ಮೊನೊಕ್ರಿಸ್ಟಲಿನ್ ಸಿಲಿಕಾನ್ ಚಿಪ್, ಚಾರ್ಜರ್: ಮಡಿಸಬಹುದಾದ ಸೌರ ಫಲಕ 4PCS ಅನ್ನು 6W ಗೆ ಮಡಚಲಾಗುತ್ತದೆ, 5PCS 8W ಆಗಿದೆ.

ಇನ್ಪುಟ್ ವೋಲ್ಟೇಜ್: 5 ವಿ / 2 ಎ., Current ಟ್ಪುಟ್ ಕರೆಂಟ್: 5 ವಿ / 2 ಎ. ಅಪ್ಲಿಕೇಶನ್‌ನ ವ್ಯಾಪ್ತಿ: ಐಪ್ಯಾಡ್‌ಗಾಗಿ, ಐಫೋನ್, ಇತರ ಬ್ರಾಂಡ್ ಮೊಬೈಲ್ ಫೋನ್‌ಗಳು, ಪಿಎಸ್‌ಪಿ, ಎಂಪಿ 3, ಎಂಪಿ 4 ಮತ್ತು ಇತರ ಡಿಜಿಟಲ್ ಉತ್ಪನ್ನಗಳಿಗೆ , ಪ್ಯಾಕೇಜ್ ಒಳಗೊಂಡಿದೆ: 1 x ಸೋಲಾರ್ ಚಾರ್ಜರ್ (ಮಡಿಸುವ 4 ಫಲಕಗಳು / ಮಡಿಸುವ 5 ಫಲಕಗಳು) 1 x ಹುಕ್ 1 x ಕಂಪಾಸ್(ಗಮನಿಸಿ: ಪವರ್ ಬ್ಯಾಂಕ್ ಒಳಗೊಂಡಿಲ್ಲ !!!!!)

**ಇಷ್ಟೆಲ್ಲ ಸೌಲಭ್ಯ ಇರುವ ಈ ಸೋಲಾರ್ ಮೊಬೈಲ್ ಚಾರ್ಜರ್ ಕೇವಲ ರೂ.3899/-ಗೆ ಪಡೆಯಿರಿ ಅಂಚೆ ಮೂಲಕ ಪಡೆಯಲು + ಅಂಚೆ ವೆಚ್ಚ ರೂ.250/- ಸೇರಿಸಿ ಒಟ್ಟು ರೂ.4149/- ಪಾವತಿಸಿದಲ್ಲಿ ಕೇವಲ 10 ದಿನಗಳಲ್ಲಿ ನಿಮ್ಮ ಮನೆ ಬಾಗಿಲಿಗೆ ಸೋಲಾರ್ ಮೊಬೈಲ್ ಚಾರ್ಜರ್ ಕಳಿಸಲಾಗುತ್ತದೆ**

**Features:**
1.HIGH CONVERSION RATE -High Quality monocrystalline silicon chip convert up to 85% of solar power to energy; conveniently charge up to devices simultaneously, great for any outdoor activities such as camping, climbing, hiking and more
2.PORTABLE AND LIGHTWEIGHT- The ultra-thin and foldable design makes it easy to carry; make full use of the eyeholes and attach it with carabiners / ropes to your backpack whenever you go out
3.DIRT & SPLASH-PROOF -The portable solar charger features an IPX4 waterproof rate, which is resistant to spraying water and dust, making it perfect for outdoor use
Specification: Size: 4 Panels:450*155*30mm, 5 Panels:550*155*35mm Colour: Black
Chip: Monocrystalline silicon chip, Charger: The foldable solar panel 4PCS is folded to 6W, 5PCS is 8W.
Input voltage: 5 v / 2A. Output current: 5 v / 2A. Scope of application: for iPad, for iPhone, other brand mobile phones, PSP, MP3, MP4 and other digital products
Package included: 1 x Solar Charger(Folding 4 panels / Folding 5 panels ) 1 x Hook1 x Compass (Notice: The power bank is not include!!!!!)

**ಸೋಲಾರ ಮೊಬೈಲ್ ಚಾರ್ಜರ್ ಖರೀದಿಸಲು ಸಂಪರ್ಕಿಸಿ ATOZ ALL SERVICES, Mob.8660728725**

# ಮೂರು ದಿನಗಳ ತರಬೇತಿ - ಮುಪ್ಪಾಗುವ ವರೆಗೂ ನಿತ್ಯ ಹಣ ಸಂಪಾದಿಸುವ ಅಲ್ಪಾವಧಿ ಕೋರ್ಸ್ ಗೆ ಪ್ರವೇಶ ಆರಂಭ..!

*ಗ್ರಾಮೀಣ ಸ್ವ ಉದ್ಯೋಗ ತಂತ್ರಜ್ಞಾನ ತರಬೇತಿ ಸಂಸ್ಥೆ ನಿರಂತರವಾಗಿ ಮೂರು ದಿನ,ವಾರ,ತಿಂಗಳು ಹಾಗೂ ಆರು ತಿಂಗಳ ಸಹಸ್ರಾರು ಅಲ್ಪಾವಧಿ ತರಬೇತಿ ಕೋರ್ಸುಗಳು ಕಳೆದ ಹಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ನಿರುದ್ಯೋಗಿ ಅಭ್ಯರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಈ ತರಬೇತಿಗಳಿಂದ ಸ್ವ ಉದ್ಯೋಗ ಒದಗಿಸಿಕೊಡುವ ಮಹತ್ವದ ಕಾರ್ಯ ನಿರ್ದೇಶಕ ವೀರೇಶ್ ಕುಮಾರ್ ಎನ್.ಮಠಪತಿ ಅವರ ಸತತ ಪರಿಶ್ರಮದಿಂದ ನಡೆಯುತ್ತಿದೆ. ನಿರುದ್ಯೋಗ ಮುಕ್ತ ಸಮಾಜ ಸಮೃದ್ಧ ರಾಷ್ಟ್ರ ಎಂಬ ಅವರ ಮೂಲ ಉದ್ದೇಶದ ತಳಹದಿಯಲ್ಲಿ ಈ ಸಂಸ್ಥೆ ಅತ್ಯಂತ ಪ್ರಮಾಣಿಕ ಹಾಗೂ ದಕ್ಷತೆಯಿಂದ ಸೇವೆಸಲ್ಲಿಸುತ್ತಿದೆ. ಕಸ್ತೂರಿ ಕಿರಣ ಪತ್ರಿಕೆಯ ಪ್ರಾಯೋಜಕತ್ವದಲ್ಲಿ ಪ್ರತಿ ಸಂಚಿಕೆಯಲ್ಲಿ ಈ ಸಂಸ್ಥೆ ಕೊಡುವ ಕೋರ್ಸುಗಳ ಪರಿಚಯ ಮಾಲಿಕೆ ಆರಂಭಿಸಲಾಗಿದೆ. ಈ ಬಾರಿ ಕೇವಲ ಕನಿಷ್ಠ ಮೂರು ದಿನ ಗರಿಷ್ಠ ಮೂರು ವಾರದ ಕಾಲಾವಧಿಯಲ್ಲಿ ಅಭ್ಯರ್ಥಿ ಡಿಜಿಟಲ್ ಸೆಲ್ಫ್ ಇಂಕ್ ಹೈಟೆಕ್ ಟೆಕ್ನಾಲಜಿ ರಬ್ಬರ ಸ್ಟ್ಯಾಂಪ್ ತಯಾರಿಸುವ ಕೋರ್ಸ್ ಬಗ್ಗೆ ಮಾಹಿತಿ ನೀಡಲಾಗಿದೆ.*

ಅಭ್ಯರ್ಥಿ ಈ ತರಬೇತಿ ಪಡೆಯಲು ಕನಿಷ್ಠ ಕನ್ನಡ ಓದಲು ಬರೆಯಲು ಸಾಮರ್ಥ್ಯ ಹೊಂದಿರಬೇಕು. ಕಂಪ್ಯೂಟರ್ ಟೈ ಮಾಡುವ ಜ್ಞಾನ ಅವಶ್ಯ. ಅಥವಾ ಹೊರಗಡೆ ಕಂಪ್ಯೂಟರ್ ಟೈಪಿಂಗ್ ಅಂಗಡಿಗಳಲ್ಲಿಯೂ ರಬ್ಬರ್ ಸ್ಟ್ಯಾಂಪ್ ಸಿದ್ಧಪಡಿಸಬೇಕಾಗ ವಿಷಯ ಟೈಪ್ ಮಾಡಿಕೊಂಡು ತರಲುಬಹುದು.(ಹೀಗೆ ಮಾಡಿದಲ್ಲಿ ಅತ್ಯಂತ ಕಡಿಮೆ ಬಂಡವಾಳದಲ್ಲಿ ಸ್ವಂತ ರಬ್ಬರ್ ಸ್ಟ್ಯಾಂಪ್ ತಯಾರಿಸುವ ಶಾಪ್ ಆರಂಭಿಸಲು ಸಾಧ್ಯ).

ತರಬೇತಿಯ ಮೂಲ ಉದ್ದೇಶ: ಇದು ವಿನೂತನ ತಂತ್ರಜ್ಞಾನದ ಹೈಟೆಕ್ ಡಿಜಿಟಲಿಕರಣದ ಆಧುನಿಕ ಜಗತ್ತಿಗೆ ಬೇಕಾಗುವ ಸ್ಲಿಮ್ ಸ್ಮಾರ್ಟ್ ರಬ್ಬರ್ ಸ್ಟ್ಯಾಂಪ್ ತಯಾರಿಸುವ ಉದ್ಯೋಗ ಕೊಡುವ ತರಬೇತಿ.

ತರಬೇತಿ ಅವಧಿ: ಸಾಮಾನ್ಯವಾಗಿ ಮೂರು ದಿನಗಳಿಂದ ಮೂರು ವಾರದ ವರೆಗೂ ತರಬೇತಿ ಅವಧಿಯಾಗಿರುತ್ತದೆ. ಇದು ಅಭ್ಯರ್ಥಿಯ ಕಲಿಕಾ ಮಟ್ಟದ ಮೇಲೆ ನಿರ್ಧಾರವಾಗುತ್ತದೆ. ಕಲಿಕೆಯಲ್ಲಿ ಸಂಪೂರ್ಣವಾಗಿ ಸಫಲತೆ ಲಭಿಸಿದ ನಂತರ ಪ್ರಮಾಣ ಪತ್ರ ವಿತರಿಸಲಾಗುತ್ತದೆ.

ಪ್ರಮಾಣ ಪತ್ರದ ಲಾಭಗಳು: ಈ ತರಬೇತಿ ಪೂರ್ಣಗೊಳಿಸಿ ಪ್ರಮಾಣ ಪತ್ರ ಪಡೆದುಕೊಂಡು ಹೊರಗಡೆ ಬರುವ ಅಭ್ಯರ್ಥಿಗೆ ರಾಜ್ಯ,ಕೇಂದ್ರ ಸರ್ಕಾರಗಳ ಸಣ್ಣ ಉದ್ಯೋಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕಾರ್ಮಿಕ ಇಲಾಖೆಗಳಿಂದ ಉದ್ಯೋಗ ಆರಂಭಿಸಲು ಹಣ ಸಹಾಯ ನೀಡಲಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕ್ ಗಳಿಂದ ಸಾಲ




ವಿತರಿಸಲಾಗುತ್ತದೆ.

ಈ ತರಬೇತಿಯ ಆದಾಯ : ತರಬೇತಿ ಮುಗಿಸಿದ ನಂತರ ಸೂಕ್ತ ವೆಚ್ಚ ಮಾಡಿ ಬೇಕಾದ ಯಂತ್ರಗಳು ( ಎಲ್ಲವೂ ನಮ್ಮ ಗ್ರಾಮೀಣ ಸ್ವ ಉದ್ಯೋಗ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿಯೇ ಲಭಿಸುತ್ತವೆ). ಖರಿದಿಸಿ ಯಾವುದಾದರು ಪಟ್ಟಣ, ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರದಲ್ಲಿ ಜನನಿಬಿಡ ಪ್ರದೇಶದಲ್ಲಿ ಪುಟ್ಟ ಅಂಗಡಿ ಮೇಲೆ **'ಹೈಟೆಕ್ ಡಿಜಿಟಲ್ ಸ್ಲಿಮ್ ರಬ್ಬರ್ ಸ್ಟ್ಯಾಂಪ್ ಮೇಕರ್'** ಎಂಬ ಆಕರ್ಷಕ ತಮ್ಮದೆ ಹೆಸರಿಸಿ ನಾಮ ಫಲಕ ಹಾಕಿಕೊಂಡು ಉದ್ಯೋಗ ಆರಂಭಿಸಿದಲ್ಲಿ ದಿನಕ್ಕೆ ಕನಿಷ್ಠ ಐದು ಜನ ಗ್ರಾಹಕರು ಬಂದರೂ ಎಲ್ಲ ಖರ್ಚು ಕಳೆದು ನಿವ್ವಳ ಎರಡು ಸಾವಿರಕ್ಕೂ ಹೆಚ್ಚಿನ ಆದಾಯ ಲಭಿಸುವುದು ನಿಶ್ಚಿತ.

ಆದಾಯದಲ್ಲಿ ವೃದ್ಧಿಮಾಡಿಕೊಳ್ಳುವ ಬಗೆ: ವೃತ್ತಿಯಲ್ಲಿ ನೈಪುಣ್ಯತೆ ಬಂದಂತೆ ಅಂದರೆ ಅಂಗಡಿ ಆರಂಭಿಸಿದ ಕನಿಷ್ಠ ಆರು ತಿಂಗಳ ನಂತರ ಸ್ಟ್ಯಾಂಪ್ ಸಿದ್ಧಪಡಿಸುವುದರಲ್ಲಿ ಆಳವಾದ ಜ್ಞಾನ ಬರಲು ಆರಂಭಿಸಿದಾಗ ನೇರವಾಗಿ ದೇಶದಾದ್ಯಂತ ಸ್ಟ್ಯಾಂಪ್ ಬುಕ್ ಮಾಡುವ ಏಜೆನ್ಸಿ ಗಳಿಗೆ ಆಕ್ರಷಕ ಕಮಿಷನ್ ಕೊಡುವ ಮೂಲಕ ನೇಮಕಾತಿ ಮಾಡಿಕೊಂಡು ಅವರ ಮೂಲಕ ನಿಮ್ಮ ಆದಾಯ ಹೆಚ್ಚಿಸಿಕೊಳ್ಳಬಹುದು ಹಾಗೂ ಅವರಿಗೂ ಉದ್ಯೋಗ ಕಲ್ಪಿಸಿದ ಪುಣ್ಯವೂ ಲಭಿಸುತ್ತದೆ.

ತರಬೇತಿ ಶುಲ್ಕ : ವಿಶೇಷವಾಗಿ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ, ಮಹಿಳೆಯರಿಗೆ ತರಬೇತಿ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಸಂಪೂರ್ಣ ತರಬೇತಿ ಪೂರ್ಣಗೊಳಿಸಲು ಅಭ್ಯರ್ಥಿ ರೂ.3500 ಶುಲ್ಕ ಪಾವತಿಸಬೇಕು(ಪರೀಕ್ಷೆ,ಪ್ರಮಾಣ ಪತ್ರ ಶುಲ್ಕ ಸೇರಿ).

ತರಬೇತಿ ಮುಗಿಸಿದ ನಂತರ ಸ್ವಂತ ಯಂತ್ರಗಳು ಖರಿದಿಸಲು ಬೇಕಾದ ಕನಿಷ್ಠ ಬಂಡವಾಳ : ತರಬೇತಿ ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅಭ್ಯರ್ಥಿ ಸ್ವಂತ ತನ್ನದೆ ರಬ್ಬರ್ ಸ್ಟ್ಯಾಂಪ್ ತಯಾರಿಸುವ ಅಂಗಡಿ ಆರಂಭಿಸಲು ರೂ.35000 ಯಂತ್ರ ಇತರ ಪದಾರ್ಥಗಳು ಖರಿದಿಸಲು ಬೇಕಾಗುತ್ತದೆ. ಸ್ವಂತ ಕಂಪ್ಯೂಟ್ , ಪ್ರಿಂಟರ್ ಬೇಕಿದಲ್ಲಿ ಪ್ರತ್ಯೇಕ ಖರಿದಿಸಬಹುದು. ಈ ಹಣದಲ್ಲಿ ಬರುವುದಿಲ್ಲ.

ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದು ಹೇಗೆ: ಇದೊಂದು ಅತ್ಯಂತ ಆಕರ್ಷಕ ಹಾಗೂ ಗುಣಮಟ್ಟದ ರಬ್ಬರ್ ಸ್ಟ್ಯಾಂಪ್ ತಯಾರಿಸುವ ಉದ್ಯೋಗವಾಗಿದೆ. ಒಬ್ಬ ಗ್ರಾಹಕ ಒಂದುಬಾರಿ ತನ್ನ ಸ್ಟ್ಯಾಂಪ್ ಮಾಡಿಸಿಕೊಂಡು ಹೋದಲ್ಲಿ ಖಂಡಿತ ಕನಿಷ್ಠ ಐದು ಜನ ಹೊಸ ಗ್ರಾಹಕರಿಗೆ ಕಳಿಸುವುದು ನಿಶ್ಚಿತ. ಏಕೆಂದರೆ ಈ ಸ್ಟ್ಯಾಂಪ್ ಗೆ ಪ್ರತ್ಯೇಕವಾಗಿ ಇಂಕ್ ಪ್ಯಾಡ್ ಅವಶ್ಯಕತೆ ಇರುವುದಿಲ್ಲ. ಎಲ್ಲವೂ ಒಂದು ಸ್ಟ್ಯಾಂಪ್ ನಲ್ಲಿಯೇ ಇರುತ್ತದೆ.ಪ್ಯಾಂಟ್ ಪಾಕೇಟ್ ನಲ್ಲಿ ಗ್ರಾಹಕ ಇಟ್ಟುಕೊಂಡು ಎಲ್ಲಿ ಬೇಕಾದರು ಹೋಗಿ ಬಳಸಬಹುದು ತೀರ ಸ್ಲಿಮ್ ಆಗಿರುತ್ತದೆ. ಆಕರ್ಷಕವಾಗಿಯೂ ಕಾಣುತ್ತವೆ. ಇನ್ನು ಮುದ್ರಣದ ಬಗ್ಗೆ ಹೇಳುವುದಾದಲ್ಲಿ ತಲೆ ಕೂದಲಿಗೂ ಸೂಕ್ಷ್ಮವಾದ ಅಕ್ಷರಗಳು ಮುದ್ರಣಮಾಡಬಹುದಾಗಿದೆ.

**ಸದರಿ ತರಬೇತಿ ಪಡೆಯಲು ಸಂಪರ್ಕಿಸಬೇಕಾದ ವಿಳಾಸ :**

ನಿರ್ದೇಶಕರು ಗ್ರಾಮೀಣ ಸ್ವ ಉದ್ಯೋಗ ತಂತ್ರಜ್ಞಾನ ತರಬೇತಿ ಸಂಸ್ಥೆ (ನಂದಿನಿ ವಿದ್ಯಾಲಯ ಕಟ್ಟಡ) ನಿರ್ಣಾ.ಜಿ.ಬೀದರ್, ಮೊ.8660728725

KASTURI KIRAN FORTNIGHTLY MARCH 16-31,2021 PAGE- 08 RS.10/- RNI NO.KAR/ KAN / 2016/68190,
POSTAL REG NO. BDR/062/2019-21

ಪೂಜ್ಯ ನಾಗಯ್ಯ ವೀರಯ್ಯ ಮಠಪತಿ ಶಿಕ್ಷಣ ಸಂಸ್ಥೆ (ರಿ) ನಿರ್ಣಾ

# ನಂದಿನಿ ಮುಕ್ತ ಶಿಕ್ಷಣ ವಿದ್ಯಾಲಯ ನಿರ್ಣಾ

**(ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಮಾನ್ಯತೆ ಪಡೆದಿದೆ)**

**(It is a ISO 9001:2015 Certified & Professional Skills Development Training Institute)**

---

**ಶಾಲಾ ವಂಚಿತರು, ಗೃಹಿಣಿಯರು, ನಿರುದ್ಯೋಗಿಗಳು, ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಂದ ನೇರವಾಗಿ**

# SSLC / PUC

## SCIENCE /ARTS/COMMERCE

## ಕೋರ್ಸುಗಳಿಗೆ ಪ್ರವೇಶ ಪ್ರಾರಂಭ

ಕರ್ನಾಟಕ ಸರ್ಕಾರದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯೂ ನಡೆಸುವ ಕರ್ನಾಟಕ ಮುಕ್ತಶಾಲೆ ಯೋಜನೆ ಅಡಿಯಲ್ಲಿ ಶಾಲಾ ವಂಚಿತ, ನಿರುದ್ಯೋಗಿ, ಗೃಹಿಣಿಯರು, ಅರೆಕಾಲಿಕ ಉದ್ಯೋಗದಲ್ಲಿರುವವರು ತಮ್ಮ ಕಲಿಕೆ ಪೂರ್ಣಗೊಳಿಸಿಕೊಂಡು ಮೂಲಕ ಮುಖ್ಯವಾಹಿನಿಗೆ ಬರುವುದಕ್ಕಾಗಿ ನೇರವಾಗಿ ಮೇಲಿನ ಎಸ್ ಎಸ್ ಎಲ್ ಸಿ / ಪಿಯುಸಿ ಕೋರ್ಸುಗಳಿಗೆ ಪ್ರವೇಶ ಪಡೆದು ಅತ್ಯಂತ ಸರಳೀಕರಣದಲ್ಲಿರುವ ಪಠ್ಯ ಅಭ್ಯಾಸ ಮಾಡಿ ನಂತರ ಪರೀಕ್ಷೆ ಬರೆದು ಉತ್ತೀರ್ಣವಾಗಬಹುದಾಗಿದೆ.

**-:ಕೋರ್ಸುಗಳ ಸೌಲಭ್ಯಗಳು:-**

- ಸದರಿ ಎಸ್ ಎಸ್ ಎಲ್ ಸಿ/ ಪಿಯುಸಿ ಪರೀಕ್ಷೆ ಪಾಸಾದ ನಂತರ ಮುಂದಿನ ವ್ಯಾಸಂಗ ಮಾಡಬಹುದು
- ಸದರಿ ಪರೀಕ್ಷೆ ಬರೆದು ಪಾಸಾದ ಅಂಕಪಟ್ಟಿಯಿಂದ ರಾಜ್ಯ ,ಕೇಂದ್ರ ಸರ್ಕಾರಗಳ ಯಾವುದೆ ಸರ್ಕಾರಿ ಉದ್ಯೋಗ ಪಡೆಯಲು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- ಸದರಿ ಪರೀಕ್ಷೆ ಪಾಸಾದ ಅಭ್ಯರ್ಥಿ ರಾಜ್ಯ,ಕೇಂದ್ರ ಸರ್ಕಾರದ ಯಾವುದೆ ಸ್ಪರ್ಧಾತ್ಮಕ ಪರೀಕ್ಷೆ ಗೆ ಅರ್ಜಿ ಸಲ್ಲಿಸಿ ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ.
- ಸದರಿ ಪರೀಕ್ಷೆ ಕನ್ನಡ, ಇಂಗ್ಲಿಷ್ ಭಾಷೆಯಲ್ಲಿ ಆದ್ಯತೆ ಮೇರೆಗೆ ಬರೆಯಬಹುದಾಗಿದೆ.
- ಪಿಯುಸಿ ಕೋರ್ಸು ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಕಲಾ, ವಾಣಿಜ್ಯ, ವಿಜ್ಞಾನ ವಿಭಾಗಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

**-:ತಕ್ಷಣ ಮೇಲಿನ SSLC / PUC ಕೋರ್ಸುಗಳ ಪ್ರವೇಶ ಪಡೆಯಲು ಸಂಪರ್ಕಿಸಿ:-**

## ಪ್ರಾಚಾರ್ಯರು. ನಂದಿನಿ ಮುಕ್ತ ಶಿಕ್ಷಣ ವಿದ್ಯಾಲಯ, ನಿರ್ಣಾ

**ತಾ.ಚಿಟಗುಪ್ಪ.ಜಿ.ಬೀದರ್.ಮೊ.866072872**

## NANDINI OPEN EDUCATION VIDYALAYA, NIRNA

PRINTED BY:VEERESHKUMAR,PUBLISHED BY:VEERESHKUMAR,OWNED BY:VEERESHKUMAR,PRINTED AT:NANDINI GRAPHICS,P.B.NO.01,PO.NIRNA,TALUK.CHITGUPPA,DT.BIDAR,KARNATAKA,PUBLISHED AT:01,PO.NIRNA,CHITGUPPA, BIDAR,KARNATAKA, EDITOR: VEERESH KUMAR, Mob. 9880212946, E Mail.kknews16@gmail.com